ಸಾಕ್ಷಿಯನ್ನು ಈಹೊತ್ತು ದಿನಾಂಕ : 04.02.2020 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಎನ್ ಎಸ್ ಆರ್ ವಕೀಲರಿಂದ :

ದಿ : 31.03.1995 ರಂದು ಸರ್ವೆ ನಂಬರ್ 105/2 ಎ ನೇ ದರಲ್ಲಿಯ ನಿವೇಶನ ಸಂಖ್ಯೆ 212 ನೇದನ್ನು ಖರೀದಿ ಮಾಡಿದಾಗಿನಿಂದ 7 ನೇ ಪ್ರತಿವಾದಿಯೇ ಮಾಲ್ಕಿ ಮತ್ತು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸುಳ್ಳು . ಸದರಿ ನಿವೇಶನದ ಮೇಲೆ ಪುಟ್ಟಮ್ಮ , ಪಾರ್ವತಮ್ಮ ಮತ್ತು ನನಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಮೃತ ಪುಟ್ಟಮ್ಮ , ಪಾರ್ವತಮ್ಮರವರು ಸದರಿ ಆಸ್ತಿಯ ಸ್ವಾಧೀನದಲ್ಲಿ ಯಾವತ್ತು ಇರಲಿಲ್ಲ ಎಂದರೆ ಸರಿಯಲ್ಲ.

2. ಪುಟ್ಟಮ್ಮ ರವರು ಬದುಕಿದ್ದಾಗ ಸರ್ವೆ ನಂಬರ್ 105/2 ಎ ಗೆ ಸಂಬಂಧಪಟ್ಟಂತೆ ಕನ್ವರ್ಷನ್ ಆದೇಶ ಕುರಿತು ಯಾವತ್ತು ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ಆದರೆ 4 ನೇ ಪ್ರತಿವಾದಿ ಅರ್ಜಿ ಸಲ್ಲಿಸಿದ ಪ್ರಕಾರ ಆ ರೀತಿ ದಿ : 16.04.1992 ರಲ್ಲಿ ಆದೇಶ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 105/2 ಇದರ ಮೂಲ ಕ್ಷೇತ್ರ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಯು ಪುಟ್ಟಮ್ಮ ರವರಿಂದ ನನ್ನ ಮೃತ ಹೆಂಡತಿ ಪಾರ್ವತಮ್ಮ ಅವರಿಗೆ ಖರೀದಿ ಮೂಲಕ ಬಂದಿರುತ್ತದೆ ಎಂದು

ಹೇಳಿರುತ್ತೇನೆ . ಸನ್ 2007 ರಲ್ಲಿ ಪುಟ್ಟಮ್ಮ ರವರು ಬದುಕಿದ್ದರು ಆದರೆ ಅವರು ಪಾರ್ಟಿ ಮಾಡಿರುವುದಿಲ್ಲ. ಸನ್ 2009 ರಲ್ಲಿ ತೀರಿಕೊಂಡಿರುತ್ತಾರೆ . ಸದರಿ ಪುಟ್ಟಮ್ಮರವರೊಂದಿಗೆ ಶಾಮಿಲಾಗಿ ನಾನು ಮತ್ತು ನನ್ನ ಹೆಂಡತಿ ದಿ : 05.03.2007 ರ ಕ್ರಯಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸುಳ್ಳು . ಅದರಂತೆ ಸೃಷ್ಟಿ ಮಾಡಿದ ಕಾಗದಪತ್ರಗಳ ಆಧಾರದ ಮೇಲೆ ಈ ದಾವೆ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪುಟ್ಟಮ್ಮರವರು ಜೀವಂತವಿದ್ದಾಗ ಮುನಿಕದರಪ್ಪರವರ ಹೆಸರಿಗೆ ಆದಂತಹ ಕನ್ವರ್ಷನ್ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಥವಾ ಕೆ ಎ ಟಿ ನಲ್ಲಿ ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಪ್ರತಿವಾದಿಯರ ಕ್ರಯಪತ್ರಗಳನ್ನು ಕೂಡ ಸದರಿ ಪುಟ್ಟಮ್ಮ ರವರು ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದರೆ ಸದರಿ ಪುಟ್ಟಮ್ಮರವರಿಗೆ ಸರ್ವೆ ನಂಬರ್ 105/2 ಎ ವಿಸ್ತೀರ್ಣ 1 ಎಕರೆ 2 ಗುಂಟೆ ಮೇಲೆ ಯಾವುದೇ ಹಕ್ಕು ಇರಲಿಲ್ಲವಾದ ಕಾರಣ ಪ್ರತಿವಾದಿಯರು ಅವಲಂಬಿಸಿದ ಕ್ರಯಪತ್ರಗಳನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

4. ಓ ಎಸ್ 9898/06 ನೇ ದನ್ನು 1 ನೇ ಪ್ರತಿವಾದಿಯು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದರು ಎಂದರೆ ಸರಿ . ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ . ಅದರಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೂಡ ಇತ್ತು ಎಂದರೆ

ಗೊತ್ತಿಲ್ಲ. ಸದರಿ ದಾವೆ ದಿ ಃ 20.07.2012 ರಂದು ಡಿಕ್ರಿಯಾಗಿದೆ ಎಂದರೆ ಸರಿಯಲ್ಲ. ಸದರಿ ಡಿಕ್ರಿಯನ್ನು ನಿಡಿ 1 ಎಂದು ಕೂಡ ಈ ದಾವೆಯಲ್ಲಿ ಗುರುತಿಸಿಕೊಳ್ಳಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿ ವಿರುದ್ದ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ಅಪೀಲು ಹಾಕಲಿಲ್ಲವಾದ ಕಾರಣ ಆ ದಾಖಲೆ ಹಾಜರುಪಡಿಸಿಲ್ಲ.

5. ಸದರಿ ದಾವೆ ಓ ಎಸ್ 9898/06 ನೇ ದರಲ್ಲಿ ನಾನು ಪ್ರತಿವಾದ ಪತ್ರ ದಾಖಲಿಸುವಾಗ ನನ್ನ ಹೆಂಡತಿ ಪಾರ್ವತಮ್ಮ ರವರ ಹೆಸರಿಗೆ ಕ್ರಯಪತ್ರ ದಿ ಃ 05.03.2007 ಆಗಿರಲಿಲ್ಲ ಎಂದರೆ ಸುಳ್ಳು . ಸದರಿ ದಾವೆಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಇದ್ದರೂ ಕೂಡ ನನ್ನ ಹೆಂಡತಿ ಹೆಸರಿಗೆ ಸುಳ್ಳು ಕ್ರಯಪತ್ರ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಅದರಂತೆ ನಿವೇಶನ ಸಂಖ್ಯೆ 716 ರ ಮಾಲೀಕರು ಓ ಎಸ್ 16949/2006 ನೇ ದನ್ನು ಕೂಡ ನನ್ನ ವಿರುದ್ದ ದಾಖಲು ಮಾಡಿದರು ಎಂದರೆ ಸರಿ . ಸದರಿ ದಾವೆ ಡಿಕ್ರಿಯಾಗಿದೆ ಎಂದರೆ ಸರಿ . ಸಾಕ್ಷಿಯು ಎಕ್ಸ್ ಪಾರ್ಟಿ ಯಾಗಿದ್ದು ಆ ಕುರಿತು ಮಿಸ್ ಅರ್ಜಿ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ .

OS 3576/2007
PW1

6. ದಿ ፡ 05.03.2007 ರಂದು ನನ್ನ ಹೆಂಡತಿಯ ಹೆಸರಿಗೆ ಕ್ರಯಪತ್ರ ಆಗುವ ಮೊದಲು ನ್ಯಾಯಾಲಯದಲ್ಲಿ ನಾಲ್ಕು ದಾವೆಗಳು ಪೇಡಿಂಗ್ ಇದ್ದವು ಎಂದರೆ ಸರಿ .

ಈ ಹಂತದಲ್ಲಿ ವಕೀಲರು ಹೆಚ್ಚಿನ ಪಾಟೀಸವಾಲಿಗೆ ವೇಳೆಯ ಅಭಾವದಿಂದ ಮುಂದೂಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .